ಪಂಪರಾಮಾಯಣ ಹಾಗೂ ತೊರವೆ ರಾಮಾಯಣಗಳು: ತೌಲನಿಕ ಅಧ್ಯಯನ

ಪಿಎಚ್.ಡಿ ಪದವಿಗಾಗಿ

ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಉದ್ದೇಶಿತ

ಸಂಶೋಧಕರು

ಶ್ರೀಮತಿ ಲಕ್ಷ್ಮೀ ಮೋರೆ

ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಸವನ ಬಾಗೇವಾಡಿ

ಮಾರ್ಗದರ್ಶಕರು

ಡಾ. ನಾರಾಯಣ ಬಿ.ಪವಾರ

ಮುಖ್ಯಸ್ಥರುಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ

ವಿಜಯಪುರ

ಪರಿವಿಡಿ

ಅಧ್ಯಯನದ ಉದ್ದೇಶ ವ್ಯಾಪ್ತಿ ,ವಿಧಾನ ಹಾಗೂ ರೂಪರೇಷೆಗಳು

ಅಧ್ಯಾಯ -೧, ಜೈನ ರಾಮಾಯಣ ಹಾಗೂ ವೈದಿಕ ರಾಮಾಯಣಗಳ ಪರಂಪರೆ

ಅಧ್ಯಾಯ-೨ ,ನಾಗಚಂದ್ರ ಹಾಗೂ ನರಹರಿಯ ಜೀವನ ವೃತ್ತಾಂತ

ಅಧ್ಯಾಯ-೩, ಪಂಪರಾಮಾಯಣ ಹಾಗೂ ತೊರವೆ ರಾಮಾಯಣ ಗಳ ವಸ್ತು ಮತ್ತು ಧೋರಣೆಗಳು

ಅಧ್ಯಾಯ- ೪ ,ಪಂಪರಾಮಾಯಣ ಹಾಗೂ ತೊರವೆ ರಾಮಾಯಣಗಳಲ್ಲಿ ರಾಮನ ಪಾತ್ರ

ಅಧ್ಯಾಯ- ೫ ಪಂಪರಾಮಾಯಣ ಹಾಗೂ ತೊರವೆ ರಾಮಾಯಣಗಳಲ್ಲಿ ರಾವಣನ ಪಾತ್ರ

ಅಧ್ಯಾಯ-೬ ,ಸ್ತ್ರೀ ಪಾತ್ರಗಳು

ಅಧ್ಯಾಯ- ೭ ,ಪಂಪ ರಾಮಾಯಣ ಹಾಗೂ ತೊರವೆ ರಾಮಾಯಣಗಳಲ್ಲಿ ಧರ್ಮ ಮತ್ತು ಕಾವ್ಯಧರ್ಮ

ಅಧ್ಯಾಯ- ೮,ಆರ್ಯ- ದ್ರಾವಿಡ ಹಾಗೂ ವಾನರ ಸಂಸ್ಕೃತಿಗಳ ಸಂಘರ್ಷ ಮತ್ತುಸಮನ್ವಯ

ಸಮಾರೋಪ

ಅಧಯನದ ಫಲಿತಗಳುಮುಂದಿನ ಅಧ್ಯಯನದ ಸಾಧ್ಯತೆಗಳು

ಗ್ರಂಥ ಋಣ

ರಾಮಾಯಣ ಮತ್ತು ಮಹಾಭಾರತ ಕಾವ್ಯಗಳು ಭಾರತೀಯ ಸಂಸ್ಕೃತಿಯ ಅಡಿಗಲ್ಲುಗಳಾಗಿವೆ. ಉದಾತ್ತ ಮೌಲ್ಯ ಗಳಿಂದಲೂ ಕಾವ್ಯಗುಣ ಗಳಿಂದಲೂ ಕೂಡಿರುವ ಈ ಕಾವ್ಯಗಳು ಭಾರತೀಯ ಜನಜೀವನದ ಮೇಲೆ ಹಾಗೂ ಸಾಹಿತ್ಯದ ಮೇಲೆ ಗಣನೀಯ ಪ್ರಭಾವ ಬೀರಿವೆ. ರಸಾತ್ಮಕವಾಗಿರುವ ಈ ಐತಿಹಾಸಿಕ ಮಹಾಕಾವ್ಯಗಳು ಕಾಳಿದಾಸ, ಭಾಸ, ಭವಭೂತಿ

ಮುಂತಾದ ಕವಿಗಳಿಗೂ ಹಾಗೂ ನಾಟಕಕಾರರಿಗೂ ಮೂಲ ಮಾತೃಕೆಯಾಗಿವೆ.ಹಾಗೂ ವಿಶ್ವವಿಖ್ಯಾತಪರಂಪರೆಯನ್ನು ನಿರ್ಮಿಸಿವೆ. ರಾಮಾಯಣ ಹಾಗೂಮಹಾಭಾರತಗಳು ನಮ್ಮ ಜನಜೀವನದ ಅಮೃತ ಬಿಂದುಗಳಾಗಿವೆ .ಸಂಸ್ಕೃತದ ಕಾವ್ಯ ವಾಹಿನಿಗೆ ಮೂಲವಾಗಿರುವ ರಾಮಾಯಣವನ್ನು 'ಭರತವರ್ಷದ ಆದಿ-ಕಾವ್ಯ' ಎಂದು ಭಕ್ತಿ ಗೌರವದಿಂದ ಕರೆಯಲಾಗಿದೆ. ಇಂತಹ ಕಾವ್ಯದ ಅಧ್ಯಯನ ನಮ್ಮ ಕನ್ನಡ ಸಾರಸ್ವತ ಲೋಕದಲ್ಲಿ ಹೇರಳವಾಗಿ ನಡೆದಿದೆ ಮತ್ತು ನಡೆಯುತ್ತಲೇ ಇದೆ. ಎಷ್ಟೇ ಅಧ್ಯಯನಗಳು ನಡೆದಿದ್ದರೂ ಕಾವ್ಯದಲ್ಲಿ ಮತ್ತೆ ಮತ್ತೆ ಹೊಸ ಪರಿಕಲ್ಪನೆಗಳು ಜನ್ಮತಾಳುತ್ತಲೇ ಇರುವುದು ಈ ಕಾವ್ಯದ ವಿಶೇಷತೆಯಾಗಿದೆ.

ಉದ್ದೇಶ:

ನಮ್ಮ ಕನ್ನಡಿಗರು ರಾಮಾಯಣದ ಅಧ್ಯಯನಗಳನ್ನು ಸಾಕಷ್ಟು ಕೈಗೊಂಡಿದ್ದರೂ ಕೂಡ ವಿಜಯಪುರ ಜಿಲ್ಲೆಯ ಪಂಪರಾಮಾಯಣ ಹಾಗೂ ತೊರವೆ ರಾಮಾಯಣಗಳ ಅಧ್ಯಯನದ ಅವಶ್ಯಕತೆ ಆಧರಿಸಿಈ ಅಧ್ಯಯನ ಕೈಗೊಳ್ಳಲಾಗಿದೆ. ಬೇರೆ ಬೇರೆ ಕಾಲಘಟ್ಟಗಳಲ್ಲಿ ಒಂದೇ ಪ್ರದೇಶದಲ್ಲಿ ಎರಡು ರಾಮಾಯಣ ಪರಂಪರೆಗಳು(ಜೈನ ಹಾಗೂ ವೈದಿಕ) ರಚನೆಗೊಂಡಿರುವುದು ಕತೂಹಲದ ಸಂಗತಿಯಾಗಿದೆ. ಇದು ನಮ್ಮ ಅಧ್ಯಯನದ ಕುತೂಹಲಕ್ಕೂ ಕಾರಣವಾಗಿದೆ. ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿರುವ ಧರ್ಮಗ್ರಂಥದಷ್ಟೇ ಮೌಲ್ಯ ಪಡೆದಿರುವ ರಾಮಾಯಣ ಭಾರತೀಯ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಒಂದೇ ಕಥಾವಸ್ತುವನ್ನು ಇಬ್ಬರು ಕವಿಗಳು ತಮ್ಮ ತಮ್ಮ ಆಶಯಕ್ಕೆ ತಕ್ಕಹಾಗೆ ಬಳಸಿಕೊಂಡಿರುವುದನ್ನು ಆಯಾ ಪರಂಪರೆಯ ಹಿನ್ನೆಲೆಯಲ್ಲಿ ಗ್ರಹಿಸುವುದು ಇಲ್ಲಿನ ಮುಖ್ಯವಾದ ಉದ್ದೇಶವಾಗಿದೆ. ಆರ್ಯ ವ್ರತದಲ್ಲಿ ಹಾಗೂ ದಕ್ಷಿಣ ಪಥದಲ್ಲಿ ಆರ್ಯ -ದ್ರಾವಿಡ ಹಾಗೂ ವಾನರ ಸಂಸ್ಕೃತಿಗಳ ಹಾಗೂ ಸಂಘರ್ಷಗಳು ಸಮಾಗಮಗೊಂಡ ಸೌಹಾರ್ದತೆಯ ಬಗ್ಗೆ ಅವಲೋಕಿಸಲಾಗುವುದು. ಈ ಕಾವ್ಯಗಳು ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಪರಂಪರೆಗೆ ಸೇರಿದವುಗಳಾಗಿವೆ.

ವ್ಯಾಪ್ತಿ:

ಜೈನ ಪರಂಪರೆ ಹಾಗೂ ವೈದಿಕ ಪರಂಪರೆಯ ಅಡಿಯಲ್ಲಿರುವಈ ರಾಮಾಯಣಗಳನ್ನುಅಧ್ಯಯನಕ್ಕೆ ಒಪಡಿಸುವುದರ ಜೊತೆಗೆ ಈವರೆಗೆ ಬಂದಿರುವ ಎಲ್ಲ ವಿಮರ್ಶೆ, ಸಂಸ್ಕೃತಿಗಳನ್ನು ಅಧ್ಯಯನಮಾಡಿ ಈ ಕವಿಗಳು ಧಾರ್ಮಿಕ ಪರಂಪರೆಗಳನ್ನು ಬಳಸಿಕೊಂಡ ರೀತಿಯನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು .ಕಾವ್ಯದ ವಸ್ತು ಹಾಗೂ ಧೋರಣೆಗಳು, ಪಾತ್ರಗಳ ವಿಶೇಷತೆ, ಪ್ರಾದೇಶಿಕ ಹಿನ್ನೆಲೆ ,ಕೃತಿಗಳ ಧರ್ಮ ಹಾಗೂ ಕಾವ್ಯಧರ್ಮಗಳ ಜೊತೆಗೆ ವಿವಿಧ ಸಂಸ್ಕೃತಿಗಳ ಹಾಗೂ ಸಂಘರ್ಷಗಳ ಸಮನ್ವಯವನ್ನು ಅವಲೋಕಿಸಲಾಗುವದು.

ವಿಧಾನ:ಪಂಪ ರಾಮಾಯಣ ಹಾಗೂ ತೊರವೆರಾಮಾಯಣಗಳು :ತೌಲನಿಕ ಅಧ್ಯಯನ ವನ್ನುವಿಶ್ಲಷಣಾತ್ಮಕವಾಗಿ ಹಾಗೂ ವಿಮರ್ಶಾತ್ಮಕವಾಗಿಹಾಗೂ ತೌಲನಿಕ ಅಧ್ಯಯನದ ವಿಧಾನಗಳನ್ನುಬಳಸಲಾಗುವದು.ಫಲಿತಗಳನ್ನು ವಿವರಣೆ ಹಾಗೂ ವ್ಯಾಖ್ಯಾನದ ಮಾದರಿಯಲ್ಲಿ ನಿರೂಪಿಸಲಾಗುವುದು.

ರೂಪರೇಷೆಗಳು:

ಆಧುನಿಕ ಸಾಹಿತ್ಯದಲ್ಲಿಅವಶ್ಯಕವಾದ ಹಾಗೂ ವಿಶಿಷ್ಟವಾದ ಸಾಹಿತ್ಯದ ದೃಷ್ಟಿಕೋನವೆಂದರೆ ಅದುತೌಲನಿಕ ದೃಷ್ಟಿಕೋನ. ಇತ್ತೀಚಿನ ದಿನಗಳಲ್ಲಿ ತನ್ನದೇ ಆದ ಮಹತ್ವ ಪಡೆಯುತ್ತಿದೆ. .ಭಿನ್ನ ಕವಿಗಳ ನಡುವಣ ಸಾದೃಶ್ಯ, ವೈದೃಶ್ಯ ,ಆಕರ ಹಾಗೂ ಪ್ರೇರಣೆ ಹಾಗೂ ಸ್ಥಾನಮಾನಗಳನ್ನು ವಸ್ತುನಿಷ್ಠವಾಗಿ ಗುರುತಿಸುವ ಆಶೆಯವಿದೆ. ಯುದ್ಧ, ವಲಸೆ ಹಾಗೂ ಅನ್ವೇಷಣೆ ಅಂತಹ ಆಶಯಗಳನ್ನು ನಾವು ಕಾಣುತ್ತೇವೆ. ವಿಮರ್ಶೆಗಳ ಹಾಗೂ ಅನೇಕ ಲೇಖನಗಳನ್ನುಆಕರವಾಗಿ ಬಳಸಲಾಗುವುದು.

ಅಧ್ಯಾಯ: - ಜೈನ ರಾಮಾಯಣಗಳ ಹಾಗೂ ವೈದಿಕ ರಾಮಾಯಣಗಳ ಪರಂಪರೆ.

ಜೈನ ಹಾಗೂ ವೈದಿಕ ಧರ್ಮಗಳು ತಮ್ಮದೇ ಆಗಿರುವ ಭಿನ್ನ ಪರಂಪರೆಗಳನ್ನು ಹೊಂದಿವೆ. ಜೈನ ಧರ್ಮ ಪಂಚಾಣು ವೃತಗಳನ್ನು ಪಾಲಿಸಿಕೊಂಡು ಆತ್ಮೋನ್ನತಿ ಸಾಧಿಸುವುದು. ಆದರೆ ವೈದಿಕ ಧರ್ಮದಲ್ಲಿವಿರಾಟ ಪುರುಷನೊಬ್ಬನ ಭಕ್ತಿಯೋಗ,ಜ್ಞಾನಯೋಗ,ಕರ್ಮಯೋಗ, ಕ್ರಿಯಾಯೋಗ ಹಾಗೂ ಲಯಯೋಗಗಳ ಮೂಲಕ ಆತ್ಮೋನ್ನತಿ ಸಾಧಿಸುವುದು. ಎರಡೂ ಪರಂಪರೆಗಳ ಮಾರ್ಗ ಬೇರೆಬೇರೆಯಾದರೂ ಗುರಿ ಒಂದೇ ಆಗಿದೆ. ಕನ್ನಡ ರಾಮಾಯಣ ಪರಂಪರೆಯಲ್ಲಿ ಜೈನ ಹಾಗೂ ವೈದಿಕ ಪರಂಪರೆಗಳು ಬಹುಮುಖ್ಯವಾಗಿವೆ .ಜೈನ ರಾಮಾಯಣ ಪರಂಪರೆಯು ಪ್ರಾಕೃತದಲ್ಲಿ ವಿಮಲ ಸೂರಿಯ ಪಉಮಚರಿಯ ದಿಂದ ಆರಂಭಗೊಂಡರೆ ಸಂಸ್ಕೃತದಲ್ಲಿ ರವಿಷೇಣನ ಪದ್ಮಪುರಾಣದಿದ ಆರಂಭಗೊಳ್ಳುತ್ತದೆ .ಅದೇ ರೀತಿಯಾಗಿ ಕನ್ನಡದಲ್ಲಿ ಜೈನರಾಮಾಯಣ ಪರಂಪರೆ ನಾಗಚಂದ್ರನ ಪಂಪರಾಮಾಯಣದಿಂದ ಆರಂಭಗೊಳ್ಳುತ್ತದೆ.ಪಂಪ ರಾಮಾಯಣದ ನಂತರ ಕುಮುದೇಂದು ರಾಮಾಯಣ,ರಾಮ ವಿಜಯಚರಿತೆ, ಹಾಗೂ ಜಿನ ರಾಮಾಯಣಗಳು ರಚನೆಯಾದವು. ವಾಲ್ಮೀಕಿ ರಾಮಾಯಣವನ್ನು ವಿಮಲ ಸೂರಿಯು ಜೈನ ಧರ್ಮಕ್ಕೆ ಅನುಗುಣವಾಗಿ ಬದಲಾವಣೆ ಮಾಡಿದ್ದಾನೆ.

ವೈದಿಕರಲ್ಲಿ ಜಾನಪದ ಕಥೆ ಯಾಗಿರುವ ರಾಮಾಯಣವು ಆದಿಕವಿ ವಾಲ್ಮೀಕಿಯಲ್ಲಿ ಮಹಾಕಾವ್ಯವಾಗಿ ಮಾರ್ಪಾಡು ಹೊಂದಿತು. ನರಹರಿಯ ಪೂರ್ವದಲ್ಲಿ ಕನ್ನಡದಲ್ಲಿ ಬಹುಶಃ ವೈದಿಕ ರಾಮಾಯಣಗಳ ರಚನೆ ಆಗಿರುವುದಿಲ್ಲ. ಆದ್ದರಿಂದಲೇ ತೊರವಿ ನರಹರಿಯೇ ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ರಚಿಸಿದ್ದಾನೆ.ಈತನ ನಂತರ 1650 ರಲ್ಲಿ ತಿರುಮಲೆ ವೈದ್ಯನು ಉತ್ತರ ರಾಮಾಯಣವನ್ನು ರಚಿಸಿದನು. ನಾರಾಯಣ ಎಂಬ ಕವಿಯು ಉತ್ತರ ರಾಮಕಥೆಯನ್ನು ಬರೆದನು.ನಂತರ ಬತ್ತಲೇಶ್ವರ ಕವಿಯು ಕೌಶಿಕ ರಾಮಾಯಣ ರಚನೆ ಆಯಿತು.ಅಲ್ಲದೇ ಬಹುಮುಖ್ಯವಾಗಿ ಮುದ್ದಣ್ಣ ಕವಿಯ ಅದ್ಭುತ ರಾಮಾಯಣ ,ಶ್ರೀ ರಾಮಾಶ್ವಮೇಧ ಕಾವ್ಯಗಳು ವೈದಿಕ ರಾಮಾಯಣದ ಮೈಲಿಗಲ್ಲುಗಳಾಗಿವೆ .ಆಧುನಿಕ ಕನ್ನಡ ಸಾಹಿತ್ಯ ಪರಂಪರೆಗೆ ಬಂದಾಗ ಮಾಸ್ತಿಯವರ ಶ್ರೀರಾಮಪಟ್ಟಾಭಿಷೇಕ ,ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮುಂತಾದವುಗಳನ್ನು ಈ ಅಧ್ಯಾಯದಲ್ಲಿಅವಲೋಕಿಸಲಾಗಿದೆ.

ಅಧ್ಯಾಯ- 2 , ನಾಗಚಂದ್ರ ಹಾಗೂ ನರಹರಿ ಕವಿಗಳ ಜೀವನ ವೃತ್ತಾಂತ

ಅಭಿನವ ಪಂಪ ಎಂದು ಕರೆಯಲಾದ ನಾಗಚಂದ್ರ ವಿಜಯಪುರದವನಾಗಿದ್ದನು. ಸ್ವತಂತ್ರ ಮನೋಧರ್ಮದ ಕವಿಯಾಗಿದ್ದನು ಎಂಬುವುದು ಆತನ ಮಲ್ಲಿನಾಥ ಪುರಾಣದಿಂದ ತಿಳಿದು ಬರುತ್ತದೆ.ಆತನು ರಾಜಕವಿಯಾಗಿರದೇ ಜಿನಕವಿಯಾಗಿದ್ದನು. ಅಲ್ಲದೇ ಜೈನ ಧರ್ಮದಲ್ಲಿ ಅಪಾರವಾದ ಶ್ರದ್ಧೆ ಹೊಂದಿದ್ದನು.ಅದೇ ರೀತಿಯಾಗಿ ಕನ್ನಡದಲ್ಲಿ ಮತ್ತೊಂದು ರಾಮಾಯಣವನ್ನೂ ವಿಜಯಪುರ ಜಿಲ್ಲೆ ನೀಡಿದೆ. ಕವಿ ನರಹರಿ ತೊರವೆ ರಾಮಾಯಣ ರಚಿಸಿ ಕೀರ್ತಿ ಪಡೆದಿದ್ದಾನೆ. ಕನ್ನಡ ಸಾರಸ್ವತ ಲೋಕಕ್ಕೆ ವಿಜಯಪುರವು ಎರೆಡೆರೆಡು ರಾಮಾಯಣಗಳನ್ನು ನೀಡಿದೆ ಎಂದರೆ ಅದು ಸಾಮಾನ್ಯ ವಿಷಯವಲ್ಲ. ಆದರೆ ಇಬ್ಬರೂ

ಕವಿಗಳಿಗೆ ಪಂಪ, ರನ್ನ, ಪೊನ್ನ, ಜನ್ನ ರಾಘವಾಂಕ ರಿಗೆ ಹಾಗೂ ಕುಮಾರವ್ಯಾಸರಿಗೆ ದೊರೆತ ಗೌರವ ಆದ್ಯತೆಗಳು ಇವರಿಗೆ ಸಿಕ್ಕಿರುವುದಿಲ್ಲ. ಈ ಅಧ್ಯಾಯದಲ್ಲಿ ಇಬ್ಬರೂ ಕವಿಗಳ ಬದುಕು-ಬರಹಗಳ ಬಗ್ಗೆ ಅಧ್ಯಯನ ಮಾಡಲಾಗಿದೆ. ಅವರ ವೈಯಕ್ತಿಕ ಭಿನ್ನತೆಗಳ ಕಡೆಗೆ ಗಮನ ಹರಿಸಲಾಗುದು. ಕವಿಗಳ ಕಾಲ ಮತ್ತು ಅವರ ಧೋರಣೆಗಳ ಬಗ್ಗೆ ಚರ್ಚಿಸಲಾಗುವದು.

ಅಧ್ಯಾಯ 3,ಪಂಪ ರಾಮಾಯಣ ಹಾಗೂ ತೊರವೆ ರಾಮಾಯಣಗಳ ವಸ್ತು ಮತ್ತು ಧೋರಣೆಗಳು

ಪಂಪ ರಾಮಾಯಣದ ಕಥಾವಸ್ತು ಪರಂಪರೆಗೆ ಸಂಬಂಧಿಸಿದರೆ ತೊರವೆ ರಾಮಾಯಣದ ಕಥಾವಸ್ತುವೈದಿಕ ಪರಂಪರೆಗೆ ಸಂಬಂಧಿಸಿದೆ. ಪಂಪ ರಾಮಾಯಣದಲ್ಲಿ ನಾಗಚಂದ್ರ ರಾಮನನ್ನು ಕಥಾನಾಯಕನನ್ನಾಗಿ ಮಾಡಿಕೊಂಡಿದ್ದಾನೆ.ಕಥೆಯ ವಿಕಾಸವಾದಂತೆ ರಾಮನನ್ನೆ ಮರೆತಂತಿದೆ .ಆದರೆ ತೊರವೆ ರಾಮಾಯಣದಲ್ಲಿ ರಾಮನ ಪಾತ್ರವನ್ನು ಪುರುಷೋತ್ತಮನಂತೆ ಚಿತ್ರಿಸಲಾಗಿದೆ .ಪಂಪ ರಾಮಾಯಣದಲ್ಲಿ ವನ ಪ್ರಯಾಣ, ಸೀತಾ ಅಪಹರಣ ಹಾಗೂ ರಾವಣನ ಮನಪರಿವರ್ತನೆ ಮುಖ್ಯವಾದರೆ ತೊರವೆ ರಾಮಾಯಣದಲ್ಲಿ ಮಂಥರೆಯ ಪಾತ್ರದ ರಚನೆ, ರಾಮನ ಮೇಲೆ ಕವಿಯ ಭಕ್ತಿ ಹಾಗೂ ಯುದ್ಧಕಾಂಡ ಗಳು ಬಹುಮುಖ್ಯವಾಗಿವೆ .ಪಂಪ ರಾಮಾಯಣದಲ್ಲಿ ಜೈನ ಧರ್ಮದ ಪ್ರಕಾರ ಯುದ್ಧವನ್ನು ಮೊಟಕುಗೊಳಿಸಿ ಸಹಬಾಳ್ವೆಗೆ ಆದ್ಯತೆ ನೀಡಿದ್ದಾರೆ. ಆದ್ದರಿಂದಲೇ ಪಂಪ ರಾಮಾಯಣ ಕೊನೆಗೊಳ್ಳುವುದು ರಾವಣ- ಲಕ್ಷ್ಮಣರು ಸಹೋದರರಾಗಿ ಜನಿಸುವುದರ ಮೂಲಕ ಇಲ್ಲಿ ಎಲ್ಲ ಪಾತ್ರಗಳು ಜೈನ ಧರ್ಮದ ದೀಕ್ಷೆ ಪಡೆಯುವುದನ್ನು ಕಾಣುತ್ತೇವೆ. ರಾಮಾಯಣ ಬರೆದ ನರಹರಿ ಕವಿ ಆದಿಲ್ ಶಾಹಿಗಳ ಕಾಲಕ್ಕೆ ಸೇರಿದವನಾದ ಕಾರಣ ಯುದ್ಧದ ಪ್ರಭಾವಕ್ಕೆ ಒಳಗಾಗಿದ್ದಾನೆ. ಹೀಗಾಗಿ ಆತನು ಯುದ್ಧ ಕಾಂಡವನ್ನು ವಿಸ್ತರಿಸುವಲ್ಲಿ ಮುಂದಾಗಿದ್ದಾನೆ. ರಾಮಾಯಣದಲ್ಲಿ ವಾಲ್ಮೀಕಿ ರಾಮಾಯಣವನ್ನು ಕವಿ ಹೆಚ್ಚಾಗಿ ಅನುಸರಿಸಿದ್ದರೂ ಕಥೆ ಉಪಕಥೆಗಳನ್ನು ಮೊಟಕುಗೊಳಿಸಿದ್ದಾರೆ. ಸೀತಾ ಸ್ವಯಂವರ ಪ್ರಸಂಗವು ಸೀತಾ ಅಪಹರಣಕ್ಕೆ ಕಾರಣವಾಗಿಸುತ್ತಾನೆ. ಕವಿ ಅವತಾರ ಪುರುಷನಾದ ರಾಮನ ಬಗ್ಗೆ ತನ್ನ ಭಾಗವತ ದೃಷ್ಟಿಯನ್ನು ತೋರಿಸಿದ್ದಾನೆ.

ಅಧ್ಯಾಯ - 4 ಪಂಪ ರಾಮಾಯಣ ಹಾಗೂ ತೊರವೆ ರಾಮಾಯಣಗಳಲ್ಲಿ ರಾಮನ ಪಾತ್ರ

ರಾಮಚಂದ್ರ ಚರಿತ ಪುರಾಣದ ನಾಯಕ ರಾಮ. ಈತ ಉದಾತ್ತ ವ್ಯಕ್ತಿ ಎಂಬುದನ್ನುನ ಇಲ್ಲಿ ಚಿತ್ರಿಸಲಾಗಿದೆ ರಾಮನ ಪಾತ್ರವನ್ನು ನಾಗಚಂದ್ರ ಜೈನ ರಾಮಾಯಣದ ಹಿನ್ನೆಲೆಯಲ್ಲಿ ಚಿತ್ರಿಸಿರುವುದನ್ನು ಅವಲೋಕಿಸುವುದು. ರಾಮ ಇಲ್ಲಿ ಬಲದೇವ ಲಕ್ಷ್ಮಣ ವಾಸುದೇವ ಆಗಿದ್ದಾನೆ, ರಾವಣ ಪ್ರತಿ ವಾಸುದೇವ. ಬಲದೇವನಾದ ರಾಮ ಜೈನ ಧರ್ಮದ ಶ್ರೇಷ್ಠ ತಿರ್ಥಂಕರ ನನ್ನಾಗಿ ಕವಿ ಸೃಷ್ಟಿ ಮಾಡಿರುವುದು ವಿಶೇಷವಾಗಿದೆ . ರಾಮನನ್ನುನಾಗಚಂದ್ರ ಭಟ್ಟಾರಕ ನನ್ನಾಗಿ ಮಾಡಿ ಕೇವಲ ಜ್ಞಾನ ಪಡೆದು ಮೋಕ್ಷ ಪಡೆಯುವಂತೆ ನೋಡುತ್ತಾನೆ. ರಾಮನು ಇಲ್ಲಿ ಯಾವುದೇ ಹಿಂಸೆ ಮಾಡುವುದಿಲ್ಲ. ರಾಮನಲ್ಲಿ ವೈರಾಗ್ಯ ಮನೋಭಾವ ಹೆಚ್ಚಾಗಿ ಮೂಡಿ ಬಂದಿದೆ. ಕೆಲವು ಸಲ ಕವಿ ರಾಮನನ್ನು ಮರೆತು ರಾವಣನ ಪಾತ್ರಕ್ಕೆ ಘನತೆ ತಂದಿದ್ದಾನೆ .ಮಾನವನಂತೆ ಚಿತ್ರಿಸುತ್ತಾನೆ. ಆದರೆ ತೊರವೆಯ ರಾಮಾಯಣದಲ್ಲಿ ರಾಮನ ಪಾತ್ರ ಅವತಾರ ಪುರುಷನಾಗಿಯೂ, ವಿರಾಟ್ ಸ್ವರೂಪ ನಾಗಿಯೂ, ದೈವೀ ಪುರುಷೋತ್ತಮನಾಗಿಯೂ ಚಿತ್ರಿತಗೊಂಡಿದೆ. ನಾಗಚಂದ್ರನ ರಾಮ ಹುಲು ಮಾನವ ಆಗುವದಕ್ಕೆ ಅವನ ಜನಾಂಗೀಕ ಪ್ರಜ್ಞೆ ಕೆಲಸ ಸಸಮಾಡಿದೆ ಎಂಬುವುದನ್ನು ಈ ಅಧ್ಯಾಯದಲ್ಲಿ ಸಾಬೀತುಪಡಿಸಲಾಗಿದೆ.ತೊರವೆ ರಾಮಾಯಣದಲ್ಲಿ ಕವಿಯ ಭಕ್ತಿಪಥವೇ ಕಾರಣವಾಗಿರುವುದನ್ನು ನಾವು ಮನಗಾಣಬಹುದಾಗಿದೆ. ನಾಗಚಂದ್ರನ ಕಾವ್ಯದಲ್ಲಿ ಜೈನ

ಧರ್ಮದ ಪರಧಿಯ ಒಳಗೆ ಸಿಕ್ಕಿದ ರಾಮನ ಪಾತ್ರ ವಾಲ್ಮೀಕಿ ರಾಮಾಯಣದ ಉತ್ತಮಿಕೆಯನ್ನು ಉಳಿಸಿಕೊಂಡಿಲ್ಲ. ಧರ್ಮದ ಕಡೆಗೆ ಹೆಚ್ಚು ಒಲವು ತೋರುತ್ತ ಅಹಿಂಸೆ ಮಾರ್ಗದಲ್ಲಿ ರಾಮನ ಪಾತ್ರವನ್ನುನಡೆಸಲು ಹೋಗಿ ಗೊಂದಲಕ್ಕೀಡಾಗುತ್ತಾನೆ. ಒಮ್ಮೆ ಸಾಮಾನ್ಯ ಮಾನವನಂತೆ ಮತ್ತೊಮ್ಮೆ ಕಾರಣಿಕ ಪುರುಷನಂತೆ ಚಿತ್ರಿಸುತ್ತಾನೆ.

ಅಧ್ಯಾಯ- 5, ಪಂಪ ರಾಮಾಯಣ ಹಾಗೂ ತೊರವೆ ರಾಮಾಯಣಗಳಲ್ಲಿ ರಾವಣನ ಪಾತ್ರ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪಂಪನ ಕರ್ಣ, ದುರ್ಯೋಧನ ರನ್ನ.ಹಾಗೂ ನಾಗಚಂದ್ರನ ರಾವಣ ಪಾತ್ರಗಳು ಓದುಗರ ಮನ ಸೆಳೆದಿವೆ. ಪಂಪ ರಾಮಾಯಣದಲ್ಲಿ ರಾವಣನು ಅತ್ಯಂತ ಉಜ್ವಲಿಸುವ ಪಾತ್ರವಾಗಿಸಲು ಕವಿ ತುಂಬಾ ಪ್ರಯತ್ನಿಸಿದ್ದಾನೆ. ಆತನ ಒಳ್ಳೆಯ ಹಾಗೂ ಉದಾತ್ತ ಗುಣದ ಬಗ್ಗೆ ವಿಶೇಷ ಗಮನ ಹರಿಸಿರುವದನ್ನು ಈ ಅಧ್ಯಾಯದಲ್ಲಿ ಅವಲೋಕಿಸಲಾಗುವದು. ವಾಲ್ಮೀಕಿ ರಾಮಾಯಣದ ರಾವಣ ಉದ್ದೇಶಪೂರ್ವಕವಾಗಿ ಸೀತೆಯನ್ನುಅಪಹರಿಸುವದಿಲ್ಲ.ಶಂಭೂಕ ವಧೆಯ ಪರಿಣಾಮದಿಂದಾಗಿ ದಂಡಕಾರಣ್ಯಕ್ಕೆ ಬರುತ್ತಾನೆ. ನಾಗಚಂದ್ರ ರಾವಣನ ಬಗ್ಗೆ ಓದುಗರಲ್ಲಿ ಸಾಹಾನುಭೂತಿಯನ್ನು ಸೃಷ್ಟಿಸುವನು ಎಂಬುವದನ್ನುಮನಗಾಣಲಾಗುವದು. ನಾಗಚಂದ್ರ ರಾವಣನ ಪಾತ್ರ ದುರಂತ ಪಾತ್ರವಲ್ಲ. ಅವನಲ್ಲಿ ಮನ ಪರಿವರ್ತನೆ ಆಗುವದು.ಇಲ್ಲಿ ರಾವಣನ ಪಾತ್ರ ರಾಕ್ಷಸ ಪಾತ್ರವಲ್ಲ. ಅವನು ವಿದ್ಯಾಧರ ಹಾಗೂ ಸದ್ಗುಣ ಸಂಪನ್ನಎಂಬುವದು ಈ ಅಧ್ಯಾಯದ ಆಶಯವಾಗಿದೆ. ಆದರೆ ತೊರವೆ ರಾಮಾಯಣದಲ್ಲಿಮೊದಲಿಗೆ ರಾವಣನು ದೂರ್ತನೂ ರಾಮ ವಿರೋಧಿಯೂ ಆಗಿರುತ್ತಾನೆ. ಕೊನೆಯಲ್ಲಿ ಅವನು ರಾಮಭಕ್ತನಾಗಿ ಶರಣಾಗತನಾದುದು ಇಲ್ಲಿನ ವೈಶಿಷ್ಟ್ಯ. ರಾಮನ ಪಾರಮ್ಯವನ್ನು ವೈಭವೀಕರಿಸುವ ಪ್ರಯತ್ನದಲ್ಲಿ ಇದ್ದಾನೆ. ಆದ್ದರಿಂದ ರಾವಣನು ಇಲ್ಲಿ ರಾಮನಿಗೆ ನಿಜವಾದ ವೈರಿಯಲ್ಲ.ಪರಮಾತ್ಮನ ಸನ್ನಿಧಿ ಸೇರಲು ರೂಪಿಸಿಕೊಂಡ ಮಾರ್ಗವೆಂದು ಕವಿ ಕಥೆ ಹೆಣೆಯುತ್ತಾನೆ. ದೈವ ಅನುಗ್ರಹ ಪಡೆದು ರಾವಣನು ಧನ್ಯನಾಗುತ್ತಾನೆ.ಕೊನೆಯಲ್ಲಿ ರಾವಣ ಹೇಳುವ ಮಾತಿನಂತೆ ರಾಮನನ್ನು ಸೇರುವದೇ ತನ್ನ ಸಂಕಲ್ಪ ಎಂಬುವದನ್ನುಕವಿ ಇಲ್ಲಿ ತೋರಿಸಿಕೊಟ್ಟಿದ್ದಾನೆ. ಕವಿ ರಾಮನ ವಿಶ್ವ ದರ್ಶನವನ್ನು ರಾವಣನಿಗೆ ಮಾಡಿಸುವನು. ಈ ಅಧ್ಯಾಯದಲ್ಲಿ ಕವಿಯು ರಾಮನ ಮಹಿಮೆಯನ್ನು ಹೊಗಳುವಲ್ಲಿ ರಾವಣನ ಘನವಂತಿಕೆಯನ್ನು ಮರೆಯುತ್ತಾನೆ.

ಅಧ್ಯಾಯ- 6 ,ಸ್ತ್ರೀ ಪಾತ್ರಗಳು

ಪಂಪ ರಾಮಾಯಣದ ಸೀತೆಯು ಇಲ್ಲಿ ಮುಖ್ಯವಾಗಿ ಮನುಷ್ಯ ಪಾತ್ರದಂತೆ ಚಿತ್ರಿತಳಾಗಿದ್ದಾಳೆ. ಅವಳ ಪತಿ ಭಕ್ತಿ ರಾವಣನ ಪಾತ್ರದ ಪರಿಚಯದ ನಂತರ ಸಿಗುತ್ತದೆ. ಆದರೆ ವಾಲ್ಮೀಕಿ ಆದರೆ ರಾಮಾಯಣದಲ್ಲಿ ಬಾಲಕಾಂಡದಲ್ಲಿ ಸಿಗುತ್ತದೆ. ಕಷ್ಟದಲ್ಲಿ ಭಾಗಿಯಾಗಲು ಮನಸ್ಸು ಮಾಡುವುದಿಲ್ಲ. ರಾಮಾಯಣದಲ್ಲಿ “ಸೀತೆ ಪತಿಯೇ ಪರದೈವ” ಎಂದು ಆತನ ಕಷ್ಟದಲ್ಲಿ ಸಮಪಾಲು ಪಡೆಯುತ್ತಾಳೆ.ಸೀತೆ ಸಾಮಾನ್ಯ ಮಾನವ ಸ್ತ್ರೀ ಅಲ್ಲ. ಸಾತ್ವಿಕ ಸ್ತ್ರೀಯರಲ್ಲಿ ಶ್ರೇಷ್ಠ ಸ್ತ್ರೀ. ಪಂಪ ರಾಮಾಯಣದ ಸೀತೆ ಅಗ್ನಿಪ್ರವೇಶದ ನಂತರ ಜೈನ ಧರ್ಮಕ್ಕೆ ಮತಾಂತರಗೊಂಡು ಜೈನ ದೀಕ್ಷೆಯನ್ನು ಪಡೆಯುತ್ತಾಳೆ. ಮಂಡೋಧರಿಯ ಸಾತ್ವಿಕ ಪಾತ್ರ ಚಿತ್ರಣಹಾಗೂ ಅವಳ ಉದಾರ ಮನೋಭಾವ ವ್ಯಕ್ತವಾಗಿದೆ.ಶೂರ್ಪನಖಿಯ

ಪಾತ್ರವನ್ನು ಚಂದ್ರನಖಿ ಎಂದು ಮಧುರವಾಗಿ ನಾಗಚಂದ್ರ ಹೇಳುವನು. ಆದರೆ ತೊರವೆ ರಾಮಾಯಣದಲ್ಲಿ ಅವಳು ಖಳನಾಯಕಿಯಂತೆ ಚಿತ್ರಣಗೊಂಡಿರುವಳು.ನಾಗಚಂದ್ರನಲ್ಲಿ ಮಂಥರೆಯ ಪಾತ್ರದ ಅಸ್ತಿತ್ವವೇ ಇಲ್ಲಆದರೆ ತೊರವೆ ರಾಮಾಯಣದಲ್ಲಿಮಂಥರೆಯೇ ರಾಮಾಯಣ ಮಾಡಿಸಿದ್ದಾಳೆ. ಅವಳು ಮಾಯಾವತರಣಿಯಾಗಿ ಕಾರಣೀಕರ್ತಳಾಗಿದ್ದಾಳೆ.

ಅಧ್ಯಾಯ- 7 ಪಂಪರಾಮಾಯಣ ಹಾಗೂ ತೊರವೆ ರಾಮಾಯಣಗಳಲ್ಲಿ ಧರ್ಮ ಮತ್ತು ಕಾವ್ಯಧರ್ಮ

ಪಂಪರಾಮಾಯಣ ಜೈನ ಪರಂಪರೆಯ ರಾಮಾಯಣಗಳಲ್ಲಿ ಪ್ರಮುಖವಾಗಿದೆ. ಈ ಕಾವ್ಯವು ಆದಿಯಿಂದ ಅಂತ್ಯದವರೆಗೆ ಧರ್ಮದ ದೃಷ್ಟಿಕೋನವನ್ನು ಎಲ್ಲಿಯೂ ಬಿಟ್ಟುಕೊಡುವುದಿಲ್ಲ. ಇಲ್ಲಿನ ಪಾತ್ರಗಳೆಲ್ಲ ಜೈನಧರ್ಮದವರಾಗುವರು. ಅಹಿಂಸೆ ಮತ್ತು ಪಂಚಾಣು ವ್ರತಗಳು,ಯುದ್ಧದ ಬದಲಾಗಿ ಮಾನವ ಸಂಬಂಧಗಳು , ಉತ್ತಮ ಅಂಶಗಳನ್ನು ಅಳವಡಿಸಲಾಗಿದೆ. ರಾಮನನ್ನು ಕೊಲೆಮಾಡಿದ ಲಕ್ಷ್ಮಣ ಅನೇಕ ಜನ್ಮಗಳಲ್ಲಿ ನರಕವನ್ನು ಅನುಭವಿಸಿ ವಿಜಯಪುರದಲ್ಲಿ ಸಹೋದರರಾಗಿ ಜನಿಸಿರುವುದು ಇಲ್ಲಿನ ವಿಶೇಷವಾಗಿದೆ. ನಾಗಚಂದ್ರನ ಯಾವ ಪಾತ್ರಗಳು ದುಷ್ಟವಾಗಿಲ್ಲ. ಅವರು ಪರಿಸ್ಥಿತಿಯ ಇಕ್ಕಟ್ಟಿಗೆ ಸಿಲುಕಿ ತಾತ್ಕಾಲಿಕವಾಗಿ ಕೆಟ್ಟವರಾಗಿ ಕಾಣುತ್ತಾರೆ. ಜಗತ್ತಿನ ಕಣ್ಣಿಗೆ ದುಷ್ಟನಾದ ರಾವಣ ಉದಾತ್ತ ದುರಂತ ನಾಯಕನಾಗಿ ಚಿತ್ರಿತನಾಗಿದ್ದಾನೆ. ಅದೇ ರೀತಿಯಾಗಿ ತೊರವೆ ರಾಮಾಯಣದಲ್ಲಿ ರಾಮನನ್ನು ದೈವಿ ಪುರುಷನೆಂದೂ, ದಶಾವತಾರಗಳಲ್ಲಿ ಒಬ್ಬನೆಂದೂ, ಭೂಮಿಯಲ್ಲಿ ಅಧರ್ಮ ತಾಂಡವಾಡುವಾಗ ಜನಸಿದನು.

ಆದರೆ ಪಂಪ ರಾಮಾಯಣದಲ್ಲಿ ರಾಮನು ಜೈನ ಧರ್ಮದ ತೀರ್ಥಂಕ ನಾಗಿ, ಶಲಾಕ ಪುರುಷರಲ್ಲಿ ಒಬ್ಬನಾಗಿ ಚಿತ್ರಿತನಾಗಿದ್ದಾನೆ. ಹೀಗಾಗಿ ಎರಡೂ ರಾಮಾಯಣಗಳು ತಮ್ಮ ತಮ್ಮ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ರಚನೆಗೊಂಡಿವೆ. ಆದರೆ ಇಲ್ಲಿ ಕೇವಲ ಧರ್ಮಮಾತ್ರವಲ್ಲ ಉತ್ಕೃಷ್ಟವಾದ ಕಾವ್ಯಾತ್ಮಕ ಗುಣದಿಂದ ಶ್ರೇಷ್ಠವಾದ ಕಾವ್ಯ ಧರ್ಮವನ್ನು ಮೆರೆದಿವೆ. ಆದ್ದರಿಂದ ಇಲ್ಲಿ ನಾನು ಧರ್ಮದ ಪ್ರತಿಪಾದನೆ ಹೇಗೆ ಆಗಿದೆ ಹಾಗೂ ಕಾವ್ಯಾತ್ಮಕವಾಗಿ ಶ್ರೇಷ್ಠವಾಗಿವೆ ಎಂಬುದನ್ನು ಗಮನಿಸಿದ್ದೇನೆ . ನಾಗಚಂದ್ರನ ಉದ್ದೇಶ ಜೈನಧರ್ಮದ ಪಾರಮ್ಯಹೇಳುವದೇ ಆಗಿದೆ. ಆದ್ದರಿಂದಲೇ ಮಲ್ಲಿನಾಥ ಪುರಾಣದಲ್ಲಿ ಜೈನ ಧರ್ಮದ ಬಗ್ಗೆ ಇರುವ ಪದ್ಯಗಳು ಪ್ರಮುಖವಾಗಿವೆ. ಅಷ್ಟೇ ಅಲ್ಲದೆ ನಾಗಚಂದ್ರನು ಪ್ರಾಚೀನ ಕವಿಗಳ ಕಾವ್ಯ ಪರಂಪರೆಯನ್ನು ಹೊರತುಪಡಿಸಿ ಎರಡು ಧಾರ್ಮಿಕ ಕಾರ್ಯಗಳನ್ನು ಬರೆದಿದ್ದಾನೆ.ಹೀಗೆ ಜೈನ ಹಾಗೂ ವೈದಿಕ ರಾಮಾಯಣಗಳಲ್ಲಿ ಧರ್ಮವೇ ಹಾಸುಹೊಕ್ಕಾಗಿದೆ. ಪುಣ್ಯವಂತರಿಗೆ ಅಷ್ಟೇ ಮೋಕ್ಷವೆಂದು ಬರೆದಿರುವ ನಮ್ಮ ಪರಂಪರೆಯಲ್ಲಿ ರಾವಣನಿಗೂ ಕೂಡ ಮೋಕ್ಷವಿದೆ ಎನ್ನುತ್ತಾನೆ ನಾಗಚಂದ್ರ. ಪಾಪಿಗಳಿಗೂ ಮೋಕ್ಷವಿದೆ ಎನ್ನುತ್ತಾನೆ.

ಅಧ್ಯಾಯ- 8 ಆರ್ಯ-ದ್ರಾವಿಡ ಹಾಗೂ ವಾನರ ಸಂಸ್ಕೃತಿಗಳ ಸಂಘರ್ಷ ಮತ್ತು ಸಮನ್ವಯ

ರಾಮಾಯಣವು ಭಾರತೀಯ ಪೌರಾಣಿಕ ಮತ್ತುಐತಿಹಾಸಿಕ ಅಂಶಗಳನ್ನು ಒಳಗೊಂಡ ಮಹಾಕಾವ್ಯವಾಗಿದೆ. ಇದರಲ್ಲಿ ಆರ್ಯ-ದ್ರಾವಿಡ ಹಾಗೂ ವಾನರ ಸಂಸ್ಕೃತಿಗಳ ಅನಾವರಣವಿದೆ. ಉತ್ತರದ ಆರ್ಯರಿಗೂ-ದಕ್ಷಿಣದ ದ್ರಾವಿಡರಿಗೂ ಮತ್ತು ವಾನರರ ಮಧ್ಯ ನಡೆದಿರುವ ಸಂಘರ್ಷ ಮತ್ತು ಸಮನ್ವಯದ ಕಥೆಯಾಗಿದೆ. ರಾಮಾಯಣವು ಪಂಪ ರಾಮಾಯಣದ ಪ್ರಕಾರ ಈ ಕಥೆಯು ಶಂಭೂಕ ವಧೆಯಿಂದ ಪ್ರಾರಂಭವಾಗಿದೆ. ಶಂಭೂಕ ವಧೆ ರಾಮಾಯಣಕ್ಕೆ ಮೂಲ ಎಂಬುವಂತೆ ನಾಗಚಂದ್ರನು ಈ ಜನಾಂಗೀಕವಾಗಿರುವ ಕಥೆ

ಹೇಳಿದ್ದಾನೆ. ರಾವಣನು ತನ್ನ ಸೋದರ ಅಳಿಯನ ಸೇಡನ್ನು ತೀರಿಸಿಕೊಳ್ಳಲು ಹೋಗಿ ಆರ್ಯ ಸೀತೆಯನ್ನು ಅಪಹರಿಸುತ್ತಾನೆ.ಇದೆ ರಾಮಾಯಣಕ್ಕೆ ಮೂಲವಾಗಿದೆ.

ಸಮಾರೋಪ:

ಜಗತ್ತಿನ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣ ಕಾವ್ಯದ ಪಾತ್ರ ತುಂಬಾ ಮಹತ್ವಪೂರ್ಣವಾಗಿದೆ. ಭಾರತೀಯರಾದ ನಮಗೆ ಜೀವನಕ್ಕೆ ಮಾರ್ಗದರ್ಶಕವಾಗಿದೆ. ನಮ್ಮ ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವ ವಾಹಿನಿಯಾಗಿದೆ. ಈ ಹಿನ್ನೆಲೆಯಲ್ಲಿ ಜೈನ ,ವೈದಿಕ ಹಾಗೂ ಬೌದ್ಧ ರಾಮಾಯಣದ ಶಾಖೆಗಳು ಬೆಳೆದುಬಂದಿವೆ. ಇದುವರೆಗೆ ಬೆಳೆದುಬಂದಿರುವ ರಾಮಾಯಣಗಳನ್ನು ಅವಲೋಕಿಸಿ ಪಂಪರಾಮಾಯಣ ಹಾಗೂ ತೊರವೆ ರಾಮಾಯಣಗಳು:ತೌಲನಿಕ ಅಧ್ಯಯನವನ್ನು ಕೈಗೊಳ್ಳಲಾಗುವುದು. ಕಾವ್ಯಗಳ ಧರ್ಮ ಹಾಗೂಕಾವ್ಯಧರ್ಮ, ವಿವಿಧ ಸಂಸ್ಕೃತಿಗಳ ಸಂಘರ್ಷ ಹಾಗೂ ಸಮನ್ವಯಗಳ ರೀತಿಯನ್ನು ಸಂಶೋಧನಾ ಪ್ರಬಂಧದಲ್ಲಿ ಮಂಡಿಸಲಾಗುವದು.

ಅಧ್ಯಯನದ ಫಲಿತಗಳು:

ಈ ಅಧ್ಯಯನದಿಂದ ಬೇರೆಬೇರೆ ಕಾಲಘಟ್ಟದ ಇಬ್ಬರು ಕವಿಗಳು ತಮ್ಮ ತಮ್ಮ ಆಶಯಕ್ಕೆ ತಕ್ಕಂತೆ ರಾಮಾಯಣದ ಕಥಾವಸ್ತುವನ್ನು ಬಳಸಿಕೊಂಡ ರೀತಿಯನ್ನುತಿಳಿಯಲಾಗುವದು. ಕವಿಗಳ ಜನಾಂಗಿಕ ಪ್ರಜ್ಞೆ ಕೃತಿಗಳ ಮೇಲೆ ಪ್ರಭಾವ ಬೀರಿದಾಗ ಆಗುವ ಬದಲಾವಣೆ ತುಂಬಾ ವಿಶೇಷವಾಗಿರುತ್ತದೆ. ನಾಗಚಂದ್ರನ ರಾವಣನ ಪಾತ್ರವೂ ವಿಶೇಷವಾಗಿ ಚಿತ್ರಿಸಲ್ಪಟ್ಟಿದೆ.

ಆದರೆ ತೊರವೆ ರಾಮಾಯಣದಲ್ಲಿ ರಾಮನ ಪಾತ್ರ ದೈವದ ಮಹೋನ್ನತಿಯನ್ನು ಸಾರುತ್ತದೆ. ಅಲ್ಲದೆ ಈ ಅಧ್ಯಯನದಿಂದ ಸ್ತ್ರೀಪಾತ್ರಗಳ ವಿಶೇಷತೆ, ಕೃತಿಗಳ ಧರ್ಮ ಹಾಗೂ ಕಾವ್ಯಧರ್ಮ, ಸಂಸ್ಕೃತಿಗಳ ಸಂಘರ್ಷ ಹಾಗೂ ಸಮನ್ವಯತೆಯನ್ನು ನಾವು ಅಧ್ಯಯನ ಮಾಡುತ್ತೇವೆ.

ಗ್ರಂಥಋಣ:

*ಆಚಾರ್ ಸೀತಾರಾಮ; 1976;ಕುಮಾರ್ ವಾಲ್ಮೀಕಿ ಒಂದು ಅಧ್ಯಯನ: ಮೈಸೂರು

ವಿಶ್ವವಿದ್ಯಾನಿಲಯ,ಮೈಸೂರು

*ಬಸವರಾಧ್ಯ ಎನ್.ಕುಮಾರ :1956: ವಾಲ್ಮೀಕಿ ವಿರಚಿತ ತೊರವೆ ರಾಮಾಯಣ : ರಿಸರ್ಚ್ ಇನ್ಸ್ಟಿಟ್ಯೂಟ್ ಮೈಸೂರ್

*ಕುವೆಂಪು;1971;ಶ್ರೀ ರಾಮಾಯಣದರ್ಶನಂ:ಮೈಸೂರು ವಿಶ್ವವಿದ್ಯಾನಲಯ,

****